# ನೀನಾಸಮ್ ಸಂಸ್ಕೃತಿ ಶಿಬಿರ
## ಅಕ್ಟೋಬರ್ ೨೦೦೪

೧೯೭೭ರಿಂದ ಇಲ್ಲಿಯವರೆಗೆ, ನೀನಾಸಮ್ ಸಂಸ್ಥೆಯು ಸತತವಾಗಿ ಪ್ರತಿ ಅಕ್ಟೋಬರಿನಲ್ಲಿ ಚಲನಚಿತ್ರ ಮತ್ತು ಸಂಸ್ಕೃತಿ ಶಿಬಿರಗಳನ್ನು ನಡೆಸುತ್ತ ಬಂದಿದೆ. ಈ ವರ್ಷದ ಸಂಸ್ಕೃತಿ ಶಿಬಿರವೂ ಅದೇ ಮಾದರಿಯಲ್ಲಿ ಯೋಜಿತವಾಗಿದೆ. ಈ ಶಿಬಿರದಲ್ಲಿ ರಂಗಭೂಮಿ, ಸಾಹಿತ್ಯ, ಸಂಗೀತ, ನೃತ್ಯ, ಚಲನಚಿತ್ರ ಮುಂತಾದ ಸಾಂಸ್ಕೃತಿಕ ಮಾಧ್ಯಮಗಳ ಸ್ವರೂಪ, ವಿಮರ್ಶೆ, ಈ ಮಾಧ್ಯಮಗಳ ಪರಸ್ಪರ ಸಂಬಂಧ ಹಾಗೂ ಒಟ್ಟೂ ಸಮಾಜದೊಂದಿಗೆ ಸಂಸ್ಕೃತಿಯ ಸಂಪರ್ಕ — ಈ ವಿಷಯಗಳ ಬಗ್ಗೆ ಅಭ್ಯಾಸ, ಚರ್ಚೆ, ವಿಚಾರ ವಿನಿಮಯ ನಡೆಯುತ್ತದೆ. ಜತೆಗೆ ಪ್ರತಿದಿನ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳ ಉತ್ಸವ ನಡೆಯುತ್ತದೆ.

ಅಲ್ಲದೆ, ಪ್ರತಿ ಶಿಬಿರದಲ್ಲಿಯೂ ಒಂದು ನಿರ್ದಿಷ್ಟ ವಿಷಯದ ಬಗ್ಗೆ ಕೇಂದ್ರೀಕರಿಸಿ ಹಲವು ಉಪನ್ಯಾಸ-ಪ್ರಾತ್ಯಕ್ಷಿಕೆ ಮತ್ತು ಚರ್ಚೆಗಳನ್ನು ನಡೆಸಲಾಗುತ್ತದೆ. ಕಳೆದ ವರ್ಷಗಳಲ್ಲಿ ನಡೆದ ಸಂಸ್ಕೃತಿ ಶಿಬಿರಗಳು — ಗ್ರಾಮಭಾರತ, ದೇವದೇವಿಯರು, ಇಪ್ಪತ್ತನೆಯ ಶತಮಾನ, ಸಂಪ್ರದಾಯಗಳು, ಸಾಂಸ್ಕೃತಿಕ ಪರ್ಯಾಯಗಳು, ಸ್ತ್ರೀಲೋಕ — ಇವೇ ಮೊದಲಾದ ಸಾಮಾಜಿಕ-ಸಾಂಸ್ಕೃತಿಕ ವಿಷಯಗಳನ್ನು ಕೇಂದ್ರೀಕರಿಸಿವೆ.

ಪ್ರತಿ ಶಿಬಿರ ಪ್ರಾರಂಭವಾಗುವುದು ಒಟ್ಟೂ ಕಾರ್ಯಕ್ರಮದ ಸ್ಥೂಲ ಸ್ವರೂಪವನ್ನು ಪರಿಚಯಿಸುವ ಅಧಿವೇಶನದಿಂದ. ಆಮೇಲಿನ ದಿನಗಳಲ್ಲಿ ರಂಗಭೂಮಿಯ ಬಗ್ಗೆ, ಸಂಗೀತ-ನೃತ್ಯ ಮಾಧ್ಯಮಗಳ ಬಗ್ಗೆ, ಸಾಹಿತ್ಯಪ್ರಕಾರಗಳ ಬಗ್ಗೆ, ಚಲನಚಿತ್ರ ಸಹೃದಯತೆಯ ಬಗ್ಗೆ ಮತ್ತು ಒಟ್ಟೂ ಸಂಸ್ಕೃತಿ-ಸಂವಹನದ ಪ್ರಕ್ರಿಯೆಯ ಬಗ್ಗೆ ಉಪನ್ಯಾಸ-ಪ್ರಾತ್ಯಕ್ಷಿಕೆ-ಚರ್ಚೆಗಳು ನಡೆಯುತ್ತವೆ. ಆಯಾ ವಿಷಯದ ಬಗ್ಗೆ ಚರ್ಚೆ ನಡೆಯುವಾಗಲೂ ಆಯ್ದ ಕೃತಿಗಳನ್ನು ಪ್ರಾಯೋಗಿಕವಾಗಿ ಬಳಸಿಕೊಳ್ಳಲಾಗುತ್ತದೆ. ಶಿಬಿರ ಪ್ರತಿನಿತ್ಯ ಬೆಳಿಗ್ಗೆ ೯ ಗಂಟೆಯಿಂದ ೧ ಗಂಟೆ ಹಾಗೂ ಮಧ್ಯಾಹ್ನ ೨-೩೦ರಿಂದ ೬ ರ ತನಕ ನಡೆಯುತ್ತದೆ.

ಇದಲ್ಲದೆ ಪ್ರತಿದಿನ ಸಂಜೆ ರಂಗಪ್ರದರ್ಶನ, ಸಂಗೀತ, ನೃತ್ಯ, ಕಾವ್ಯವಾಚನ ಹಾಗೂ ಇನ್ನಿತರ ಕಾರ್ಯಕ್ರಮಗಳು ಶಿಬಿರಾರ್ಥಿಗಳು ಮತ್ತು ಸಾರ್ವಜನಿಕರಿಗಾಗಿ ಏರ್ಪಾಟಾಗಿರುತ್ತದೆ.

ಈ ಎಲ್ಲ ಕಾರ್ಯಕ್ರಮಗಳ ಮೂಲಕ ಸಂಸ್ಕೃತಿ ಶಿಬಿರವು ಉದ್ದೇಶಿಸಿಕೊಂಡಿರುವ ಗುರಿ ಎರಡು ಬಗೆಯದಾಗಿದೆ — ೧. ಕರ್ನಾಟಕ ಮತ್ತು ಹೊರಗಿನ ಚಿಂತಕರು ಮತ್ತು ಕಲಾವಿದರು ವರ್ಷಕ್ಕೊಮ್ಮೆ ಒಗ್ಗೂಡಿ ಪರಸ್ಪರ ಚರ್ಚಿಸುವ ವೇದಿಕೆಯೊಂದನ್ನು ರೂಪಿಸುವುದು ಮತ್ತು ೨. ಮತ್ತು, ಜತೆಗೇ, ಕರ್ನಾಟಕದ ಸಾಮಾಜಿಕ-ಸಾಂಸ್ಕೃತಿಕ ವಿದ್ಯಮಾನಗಳಲ್ಲಿ ಆಸಕ್ತರೂ ಕ್ರಿಯಾಶೀಲರೂ ಆಗಿರುವವರ ನಡುವೆ ಒಂದು ಸಂವೇದನಾಶೀಲ ಸಂವಾದವನ್ನು ಏರ್ಪಡಿಸುವುದು.

ನೀನಾಸಮ್, ಹೆಗ್ಗೋಡು, ಸಾಗರ, ಕರ್ನಾಟಕ ೫೭೭ ೪೧೭

# ನೀನಾಸಮ್ ಸಂಸ್ಕೃತಿ ಶಿಬಿರ - ೨೦೦೪
## ಹಗಲಿನ ಕಾರ್ಯಕ್ರಮಗಳು

ಡಾ. ಯು.ಆರ್. ಅನಂತಮೂರ್ತಿ ಅವರು ನಿರ್ದೇಶಕರಾಗಿರುವ ಈ ಬಾರಿಯ ಶಿಬಿರವು 'ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ರಿಯಾಶೀಲತೆ' ಎಂಬ ವಿಷಯವನ್ನು ಕುರಿತು ಸ್ಥೂಲವಾಗಿ ಕೇಂದ್ರೀಕರಿಸುತ್ತದೆ.

ಈಚಿನ ವರ್ಷಗಳಲ್ಲಿ ತುಂಬ ಚರ್ಚಿತವಾಗುತ್ತಿರುವ ಈ 'ಕ್ರಿಯಾಶೀಲತೆ' (ಆ್ಯಕ್ಟಿವಿಸಮ್) ಎಂಬ ವಿಚಾರವನ್ನು ಕುರಿತಂತೆ ವಿವಿಧ ಸ್ತರಗಳಲ್ಲಿ ಈ ಶಿಬಿರವು ಚರ್ಚೆ-ಸಂವಾದಗಳನ್ನು ನಡೆಸಲು ಉದ್ದೇಶಿಸಿದೆ. ಇಂಥ ಸಾಮಾಜಿಕ-ಸಾಂಸ್ಕೃತಿಕ ಕ್ರಿಯಾಶೀಲತೆಯ ಸ್ವರೂಪಗಳೇನು, ಪ್ರಸ್ತುತ ಸಮಾಜದಲ್ಲಿ ಇಂಥ ಕ್ರಿಯಾಶೀಲತೆಯ ಪಾತ್ರ ಯಾವುದು, ಮತ್ತು ಈ ಕ್ರಿಯಾಶೀಲತೆಯ ವಲಯದಲ್ಲಿ ಈಚೆಗೆ ಉದ್ಭವವಾಗುತ್ತಿರುವ ಸಮಸ್ಯೆ-ಸವಾಲುಗಳು ಯಾವ ಬಗೆಯವು — ಈ ಎಲ್ಲ ವಿಷಯಗಳಿಗೆ ಸಂಬಂಧಿಸಿದಂತೆ, ಕೆಲವು ಉಪನ್ಯಾಸ ಮತ್ತು ಚರ್ಚೆಗಳು ಈ ಶಿಬಿರದಲ್ಲಿ ನಡೆಯಲಿವೆ. ಡಾ. ಯು.ಆರ್. ಅನಂತಮೂರ್ತಿ ಅವರಲ್ಲದೆ, ಡಾ. ಶಿವ ವಿಶ್ವನಾಥನ್, ಶ್ರೀ ಸದಾನಂದ ಮೆನೊನ್ ಮೊದಲಾದವರು ಈ ವಿಚಾರವನ್ನು ಕುರಿತು ಶಿಬಿರದಲ್ಲಿ ಮಾತಾಡಲಿದ್ದಾರೆ.

ಇದಕ್ಕೆ ಪೂರಕವಾಗಿ, ಬೇರೆಬೇರೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಇವತ್ತು ನಾವು ಕಾಣುತ್ತಿರುವ ಕ್ರಿಯಾಶೀಲತೆಯ ವಿಭಿನ್ನ ಉದಾಹರಣೆಗಳನ್ನು ಕುರಿತೂ ಈ ಶಿಬಿರದಲ್ಲಿ ಸಂವಾದ ಮತ್ತು ಚರ್ಚೆಗಳನ್ನು ಏರ್ಪಡಿಸಲಾಗಿದೆ. ರಂಗಭೂಮಿ, ಚಲನಚಿತ್ರ, ಕನ್ನಡ ಭಾಷೆ, ಕನ್ನಡ ನಾಡಿನ ದಲಿತ ಮತ್ತು ರೈತ ಚಳುವಳಿಗಳು, ವಿಜ್ಞಾನ — ಇವೇ ಮೊದಲಾದ ಕ್ಷೇತ್ರಗಳನ್ನು ಕೇಂದ್ರವಾಗಿ ಇಟ್ಟುಕೊಂಡು ನಡೆಯಲಿರುವ ಈ ಚರ್ಚೆಗಳಲ್ಲಿ — ಶ್ರೀ ಜಿ. ರಾಜಶೇಖರ್, ಶ್ರೀ ಮನು ಚಕ್ರವರ್ತಿ, ಶ್ರೀ ಸಮೀಕ್ ಬ್ಯಾನರ್ಜಿ, ಶ್ರೀಮತಿ ಸುದೇಷ್ಣಾ ಬ್ಯಾನರ್ಜಿ, ಶ್ರೀ ಕೆ.ಎಚ್. ಶ್ರೀನಿವಾಸ್, ಶ್ರೀ ಸದಾನಂದ್, ಶ್ರೀ ರಾಜಾರಾಮ ಹೆಗಡೆ, ಶ್ರೀ ಸುಧನ್ವ ದೇಶಪಾಂಡೆ, ಶ್ರೀ ಕೇವಲ್ ಅರೋರಾ, ಶ್ರೀ ರಘುನಂದನ, ಶ್ರೀ ದೀಪು, ಶ್ರೀ ಕಿ.ರಂ. ನಾಗರಾಜ್, ಡಾ. ಕೆ. ಮರುಳಸಿದ್ದಪ್ಪ, ಶ್ರೀ ಇಂದೂಧರ ಹೊನ್ನಾಪುರ, ಶ್ರೀ ಕೆ.ಎಸ್. ಪುಟ್ಟಣ್ಣಯ್ಯ, ಡಾ. ರೊದ್ದಂ ನರಸಿಂಹ — ಮೊದಲಾದ ಗಣ್ಯರು ಮಾತಾಡಲಿದ್ದಾರೆ.

ಇದೆಲ್ಲದರ ಜತೆಗೆ, ಪ್ರತಿ ಶಿಬಿರಗಳಲ್ಲೂ ನಡೆಯುವಂತೆಯೇ, ಈ ಬಾರಿಯೂ ಕಲಾಸಹೃದಯತೆಗೆ ಸಂಬಂಧಿಸಿದ ಉಪನ್ಯಾಸ ಪ್ರಾತ್ಯಕ್ಷಿಕೆಗಳು ನಡೆಯಲಿವೆ. ತಿರುಗಾಟ ನಾಟಕಗಳ ಚರ್ಚೆ-ವಿಶ್ಲೇಷಣೆಯೇ ಅಲ್ಲದೆ, ಕಾವ್ಯ, ಸಂಗೀತ, ನೃತ್ಯ ಮತ್ತು ಚಲನಚಿತ್ರಕ್ಕೆ ಸಂಬಂಧಿಸಿದ ರಸಗ್ರಹಣ ಕಾರ್ಯಕ್ರಮಗಳನ್ನು ಈ ಬಾರಿ — ಶ್ರೀ ಭಾಸ್ಕರ ಚಂದಾವರ್ಕರ್, ಡಾ. ಚಂದ್ರಶೇಖರ ಕಂಬಾರ, ಶ್ರೀಮತಿ ಉಷಾ ನಾಂಗ್ಯಾರ್, ಶ್ರೀ ವೇಂದಾಂತಮ್ ಸತ್ಯನಾರಾಯಣ ಶರ್ಮ ಮೊದಲಾದವರು ನಡೆಸಿಕೊಡಲಿದ್ದಾರೆ.

ಶಿಬಿರ ನಿರ್ದೇಶಕರು: ಡಾ. ಯು.ಆರ್. ಅನಂತಮೂರ್ತಿ

## ನೀನಾಸಮ್ ಸಂಸ್ಕೃತಿ ಶಿಬಿರ
## ಅಕ್ಟೋಬರ್ ೨೦೦೪
## ಸಂಜೆಯ ಸಾಂಸ್ಕೃತಿಕ ಕಾರ್ಯಕ್ರಮಗಳು

ಅಕ್ಟೋಬರ್ ೧೦, ಭಾನುವಾರ
**ತಿರುಗಾಟ ನಾಟಕ – ದ್ಯಾವನೂರು**
ನಿರ್ದೇಶನ: ಸಿ. ಬಸವಲಿಂಗಯ್ಯ

ಅಕ್ಟೋಬರ್ ೧೧, ಸೋಮವಾರ
**ತಿರುಗಾಟ ನಾಟಕ – ರಾಜ ಮತ್ತು ರಾಣಿ**
ನಿರ್ದೇಶನ: ಬಿ.ಆರ್. ವೆಂಕಟರಮಣ ಐತಾಳ

ಅಕ್ಟೋಬರ್ ೧೨, ಮಂಗಳವಾರ
**ಸ್ಯಾಕ್ಸೊಫೋನ್ ವಾದನ**
**ಪದ್ಮಶ್ರೀ ಕದ್ರಿ ಗೋಪಾಲನಾಥ್**

ಅಕ್ಟೋಬರ್ ೧೩, ಬುಧವಾರ
**ನಾಂಗ್ಯಾರ್ ಕೂತ್ತು ಪ್ರದರ್ಶನ – ಶ್ರೀಮತಿ ಉಷಾ ನಾಂಗ್ಯಾರ್**
**ಆಧುನಿಕ ನೃತ್ಯ – ನೃತರುತ್ಯ, ಬೆಂಗಳೂರು**

ಅಕ್ಟೋಬರ್ ೧೪, ಗುರುವಾರ
ಏಕವ್ಯಕ್ತಿ ನಾಟಕ ಪ್ರಯೋಗ
**ಕಬೀರ – ಶ್ರೀ ಶೇಖರ್ ಸೇನ್, ಮುಂಬಯಿ**

ಅಕ್ಟೋಬರ್ ೧೫, ಶುಕ್ರವಾರ
ಕೂಚಿಪುಡಿ ಪ್ರದರ್ಶನ
**ಭಾಮಾಕಲಾಪಮ್ ಮತ್ತು ಉಷಾಪರಿಣಯ**
**ಶ್ರೀ ವೇದಾಂತಮ್ ಸತ್ಯನಾರಾಯಣ ಶರ್ಮ**

ಅಕ್ಟೋಬರ್ ೧೬, ಶನಿವಾರ
**ಹಿಂದುಸ್ತಾನಿ ಗಾಯನ – ಶ್ರೀ ರವಿಕಿರಣ**
**ನಾಟಕ – ಮಲ್ಲಿನಾಥನ ಧ್ಯಾನ**
**ಧ್ಯಾನ ರೆಪರ್ಟರಿ, ಬೆಂಗಳೂರು**

**ಪ್ರತಿದಿನ ಸಂಜೆ ೭ ಗಂಟೆಗೆ**
**ಶಿವರಾಮ ಕಾರಂತ ರಂಗಮಂದಿರ, ಹೆಗ್ಗೋಡು**
ಪ್ರವೇಶ: ರೂ. ೧೦೦ (ಎಲ್ಲ ದಿನಕ್ಕೆ)
ರೂ. ೧೫, ರೂ. ೧೦ (ಪ್ರತಿದಿನ)

## ಅಕ್ಟೋಬರ್ ೧೦ ಭಾನುವಾರ



ತಿರುಗಾಟ ನಾಟಕ

# ದ್ಯಾವನೂರು

ದೇವನೂರ ಮಹಾದೇವ ಅವರ
ಬರಹಗಳನ್ನು ಆಧರಿಸಿ ರೂಪಿಸಿದ ರಂಗಪ್ರಸ್ತುತಿ
ವಿನ್ಯಾಸ: ಚನ್ನಕೇಶವ
ರಂಗರೂಪ ಮತ್ತು ನಿರ್ದೇಶನ: ಸಿ. ಬಸವಲಿಂಗಯ್ಯ

ಕನ್ನಡದ ಪ್ರಸಿದ್ಧ ಲೇಖಕ ದೇವನೂರ ಮಹಾದೇವ ಅವರ ಹಲವಾರು ಕಥೆ-ಕಾದಂಬರಿಗಳು, ಲೇಖನ-ಸಂದರ್ಶನಗಳು ಮತ್ತು ಇನ್ನಿತರ ಬರಹಗಳನ್ನು ಮೂಲವಾಗಿ ಇಟ್ಟುಕೊಂಡು, ಆ ಬರಹಗಳಿಂದಲೇ ಆಯ್ದು ನಿರ್ಮಿಸಿದ ಒಂದು ವಿಶೇಷ ಪಠ್ಯವನ್ನು ಆಧರಿಸಿ ಈ ರಂಗಪ್ರಯೋಗವು ನಿರ್ಮಿತವಾಗಿದೆ. ಜತೆಗೆ, ದೇವನೂರರನ್ನು ಕುರಿತು ಬಂದ ಕೆಲ ವಿಮರ್ಶಾ ಬರಹಗಳೂ ಈ ಕೃತಿಯ ಪಠ್ಯಕ್ಕೆ ಸೇರಿಕೊಂಡಿವೆ.

ಇಂಥ ಪಠ್ಯದ ತುಣುಕುಗಳನ್ನು ವಿಶೇಷವಾದ ಒಂದು ವಿನ್ಯಾಸದಲ್ಲಿ ಹೆಣೆಯುವ ಮೂಲಕ ಒಂದು ದಿಕ್ಕಿನಿಂದ ದೇವನೂರ ಮಹಾದೇವ ಅವರ ಸಾಹಿತ್ಯ-ವ್ಯಕ್ತಿತ್ವವನ್ನೂ ಮತ್ತು ಇನ್ನೊಂದು ಕಡೆಯಿಂದ, ಅವರ ಕೃತಿಸಮೂಹದ ಹಿಂದಿರುವ ಒಂದು ‘ಕೃತಿ-ವ್ಯಕ್ತಿತ್ವ’ವನ್ನೂ ರಂಗರೂಪದಲ್ಲಿ ಆವಿಷ್ಕರಿಸುವ ಹೊಸ ಆಕಾಂಕ್ಷೆಯನ್ನು ಪ್ರಸ್ತುತ ಪ್ರಯೋಗ ಇಟ್ಟುಕೊಂಡಿದೆ. ಮಾತ್ರವಲ್ಲ, ದೇವನೂರರ ಎಲ್ಲ ಕೃತಿಗಳ ಹಿಂದಿರುವ ಆಶಯಗಳ ಪರಸ್ಪರ ಸಂಬಂಧ ಯಾವ ಬಗೆಯದು, ಮತ್ತು ಈ ಕೃತಿಗಳ ಅಂತರ್ ಪಠ್ಯೀಯತೆಯ ಮೂಲಕ ಅಭಿವ್ಯಕ್ತಗೊಳ್ಳುವ ಒಂದು ಪ್ರತಿಮಾಲೋಕ ಯಾವ ರೀತಿಯದು – ಇಂಥ ಹಲವಾರು ಪ್ರಶ್ನೆಗಳನ್ನು ಆಕರ್ಷಕವಾದ ಪ್ರಯೋಗವೊಂದರ ಮೂಲಕವೇ ಎತ್ತುವ ಹೊಸಬಗೆಯ ಪ್ರಯತ್ನ ಈ ರಂಗಕೃತಿಯ ಹಿಂದಿದೆ.

**ಸಂಜೆ ೭ ಗಂಟೆಗೆ**

## ಅಕ್ಟೋಬರ್ ೧೧ ಸೋಮವಾರ

ತಿರುಗಾಟ ನಾಟಕ

# ರಾಜ ಮತ್ತು ರಾಣಿ

ರವೀಂದ್ರನಾಥ ಠಾಕೂರ್ ಅವರ

ನಾಟಕದ ಕನ್ನಡ ರೂಪಾಂತರ: ಕೆ.ವಿ. ಸುಬ್ಬಣ್ಣ

ವಿನ್ಯಾಸ ಮತ್ತು ನಿರ್ದೇಶನ: ವೆಂಕಟರಮಣ ಐತಾಳ

ಭಾರತದ ಸುಪ್ರಸಿದ್ಧ ಲೇಖಕ ರವೀಂದ್ರನಾಥ ಠಾಕೂರ್ ಅವರು ತಮ್ಮ ಬರಹದ ಬದುಕಿನ ಆರಂಭಕಾಲದಲ್ಲಿ ರಚಿಸಿದ ಕೃತಿ – 'ರಾಜಾ ಓ ರಾಣಿ'. ಪ್ರಸ್ತುತ ರಂಗಕೃತಿಯು ಟಾಗೋರರ ಈ ನಾಟಕವನ್ನಾಧರಿಸಿದ ಒಂದು ರೂಪಾಂತರ. ಕಾಲ್ಪನಿಕವಾದ ಒಂದು ರಾಜ್ಯದ ಕಥಾನಕವನ್ನು ಈ ಕೃತಿಯು ಹಿನ್ನೆಲೆಗೆ ಇಟ್ಟುಕೊಂಡಿದೆ; ಆ ರಾಜ್ಯದ ಆಡಳಿತದಲ್ಲಿ ಉದ್ಭವವಾದ ಒಂದು ಬಿಕ್ಕಟ್ಟಿನ ಪ್ರಸಂಗದಿಂದ ಮೊದಲುಗೊಳ್ಳುತ್ತದೆ. ಮುಂದೆ ಈ ನಾಟಕದ ಕಥೆಯು ಹಲವಾರು ರಾಜ್ಯಗಳನ್ನೂ ಅಲ್ಲಲ್ಲಿಯ ರಾಜರುಗಳನ್ನೂ ಕೂಡಿಸಿ ಹೆಣೆಯುತ್ತ, ಪ್ರಭುತ್ವ ಮತ್ತು ಅಧಿಕಾರಗಳ ನಡುವಿನ ಹಲವು ಸಂಬಂಧಸೂಕ್ಷ್ಮಗಳನ್ನು ಅನಾವರಣಗೊಳಿಸುತ್ತ ಹೋಗುತ್ತದೆ.

ಇನ್ನೊಂದು ದಿಕ್ಕಿನಿಂದ ಈ ನಾಟಕವು ಆ ರಾಜ್ಯದ ರಾಜರಾಣಿಯರ ಪಾತ್ರಸಂಬಂಧಗಳನ್ನು ಸೂಕ್ಷ್ಮವಾದ ಪರಿಶೀಲನೆಗೆ ಒಡ್ಡುತ್ತದೆ. ಆ ಮೂಲಕ ಗಂಡುತನ-ಹೆಣ್ಣುತನ, ಪ್ರೀತಿ-ತ್ಯಾಗ, ಸಮಾಜ-ವೈಯಕ್ತಿಕ ಸಂಬಂಧ – ಮೊದಲಾದ ಹಲವು ಮೌಲ್ಯಗಳ ತಾಕಲಾಟಗಳನ್ನು ಈ ನಾಟಕವು ಠಾಕೂರರಿಗೇ ವಿಶಿಷ್ಟವಾದ ರಂಗಶೈಲಿಯಲ್ಲಿ ಮಂಡಿಸುತ್ತದೆ.

ಠಾಕೂರರ ಇಂಥ ವಿಶಿಷ್ಟ ರಂಗಶೈಲಿಯನ್ನು, ಪ್ರಸ್ತುತ ಕನ್ನಡ ರಂಗಭೂಮಿಗೆ ದಕ್ಕಬಲ್ಲ ಅಭಿನಯ ಮತ್ತು ರಂಗಪ್ರಸ್ತುತಿಯ ಪರಿಭಾಷೆಗಳಲ್ಲಿ ಆವಿಷ್ಕರಿಸುವುದು ಈ ಪ್ರಯೋಗದ ಪ್ರೇರಣೆಯಾಗಿದೆ.

**ಸಂಜೆ ೭ ಗಂಟೆಗೆ**

## ಅಕ್ಟೋಬರ್ ೧೨ ಮಂಗಳವಾರ

ಸಂಗೀತ ಕಾರ್ಯಕ್ರಮ

# ಪದ್ಮಶ್ರೀ ಕದ್ರಿ ಗೋಪಾಲನಾಥ್

ಅವರಿಂದ ಸ್ಯಾಕ್ಸೊಫೋನ್ ವಾದನ

ಸ್ಯಾಕ್ಸೊಫೋನ್ ಚಕ್ರವರ್ತಿ ಎಂಬ ಬಿರುದನ್ನು ಗಳಿಸಿ ಕರ್ನಾಟಕದಾದ್ಯಂತ ಮತ್ತು ಹೊರನಾಡುಗಳಲ್ಲಿ ಜನಪ್ರಿಯರಾಗಿರುವ ಕದ್ರಿ ಗೋಪಾಲನಾಥ್ ಅವರು ಮೂಲತಃ ಮಂಗಳೂರಿನವರು. ತಂದೆ ತನಿಯಪ್ಪನವರು, ಶ್ರೀ ಗೋಪಾಲಕೃಷ್ಣ ಅಯ್ಯರ್ ಅವರಲ್ಲಿ ಸಂಗೀತಾಭ್ಯಾಸ ಮಾಡಿದ ಕದ್ರಿಯವರು ಮುಂದೆ ಹಿರಿಯ ಮೃದಂಗ ವಿದ್ವಾಂಸ ಟಿ.ವಿ. ಗೋಪಾಲಕೃಷ್ಣನ್ ಅವರ ನೆರವಿನಿಂದ ತಮ್ಮ ಸಂಗೀತ ವ್ಯಕ್ತಿತ್ವವನ್ನು ಬೆಳೆಸಿಕೊಂಡರು. ಪದ್ಮಶ್ರೀ ಮತ್ತು ರಾಜ್ಯೋತ್ಸವ ಪ್ರಶಸ್ತಿ ಮೊದಲಾದ ಹಲವಾರು ಪುರಸ್ಕಾರಗಳನ್ನು ಪಡೆದಿರುವ ಇವರಿಗೆ ಕೇಂದ್ರಸಂಗೀತನಾಟಕ ಅಕಾಡೆಮಿಯ ಗೌರವವೂ ಸಂದಿದೆ. ಇವರ ವಾದನದ ಬಹುಸಂಖ್ಯೆಯ ಧ್ವನಿ ಸುರುಳಿಗಳು ಕೂಡಾ ನಾಡಿನಾದ್ಯಂತ ತುಂಬ ಜನಪ್ರಿಯವಾಗಿವೆ.

ಸ್ಯಾಕ್ಸೊಫೋನ್‌ನಂತಹ 'ವಿದೇಶಿ' ವಾದ್ಯವೊಂದನ್ನು ಕರ್ನಾಟಕ ಶಾಸ್ತ್ರೀಯ ಸಂಗೀತದ ನಯ-ನವಿರು ಮತ್ತು ಲಯವೈವಿಧ್ಯಕ್ಕೆ ಹೊಂದುವಂತೆ ಸಮರ್ಥವಾಗಿ ರೂಪಾಂತರಿಸಿ ಬಳಸಿಕೊಳ್ಳುವ ವಿಶಿಷ್ಟ ಪ್ರತಿಭೆ ಕದ್ರಿ ಗೋಪಾಲನಾಥ್ ಅವರಿಗೆ ದಕ್ಕಿದೆ. ಮತ್ತು ಈ ಕಾರಣಕ್ಕಾಗಿಯೇ ಇವರು ಸಂಗೀತ ಜಗತ್ತಿನ ವಿಶೇಷ ಮನ್ನಣೆಗೆ ಪಾತ್ರರಾಗಿದ್ದಾರೆ.

ಪ್ರಸ್ತುತ ಕಾರ್ಯಕ್ರಮದಲ್ಲಿ ಕದ್ರಿ ಗೋಪಾಲನಾಥ್ ಅವರೊಂದಿಗೆ ಸಹವಾದ್ಯಗಳಲ್ಲಿ ಪಾಲ್ಗೊಳ್ಳುವ ಕಲಾವಿದರು – ಕಲೈಮಾಮಣಿ ಎ. ಕನ್ಯಾಕುಮಾರಿ (ಪಿಟೀಲು), ಕಲೈಮಾಮಣಿ ಡಂಕಣಕೋಟೆ ವಿ. ಮಣಿ (ತವಿಲ್) ಮತ್ತು ಎ.ಎಸ್. ಎನ್. ಸ್ವಾಮಿ (ಖಂಜೀರಾ).

**ಸಂಜೆ ೭ ಗಂಟೆಗೆ**

## ಅಕ್ಟೋಬರ್ ೧೩ ಬುಧವಾರ



ನಾಂಗ್ಯಾರ್ ಕೂತ್ತು ರಂಗ ಪ್ರಯೋಗ

# ಕಂಸವಧಮ್

### ಶ್ರೀಮತಿ ಉಷಾ ನಾಂಗ್ಯಾರ್, ತ್ರಿಶೂರು
### ಮತ್ತು ತಂಡದವರಿಂದ

ಕೇರಳ ಪ್ರಾಂತದ ಅತ್ಯಂತ ಪ್ರಾಚೀನ ರಂಗಕಲೆಗಳಲ್ಲೊಂದಾದ ಕೂಡಿಯಾಟ್ಟಮ್ ಅಲ್ಲಿ ಹಲವಾರು ಉಪರಂಗಪ್ರಕಾರಗಳನ್ನು ಸೃಷ್ಟಿಸಿದ್ದು ಅವುಗಳಲ್ಲೊಂದು – ನಾಂಗ್ಯಾರ್ ಕೂತ್ತು. ಸ್ತ್ರೀಯರೇ ಮುಖ್ಯ ಪಾತ್ರಧಾರಿಗಳಾಗಿರುವ ಈ ರಂಗಪ್ರಕಾರವು ಉಳಿದ ವಿಷಯಗಳಲ್ಲಿ ಕೂಡಿಯಾಟ್ಟಮ್ ಪ್ರಕಾರವನ್ನೇ ಬಹುತೇಕ ಹೋಲುತ್ತದೆ. ತುಂಬ ಸೂಕ್ಷ್ಮವಾದ ಆಂಗಿಕ-ಮುಖ-ಹಸ್ತಾಭಿನಯಗಳು, ಶೈಲೀಕೃತವಾದ ವಾಚಿಕಾಭಿನಯ – ಇತ್ಯಾದಿಗಳನ್ನೊಳಗೊಂಡಿರುವ ಈ ಪ್ರಕಾರದ ಕಥಾನಿರೂಪಣೆಯ ವಿಧಾನ ಕೂಡಾ ತುಂಬ ಅಸಾಧಾರಣವಾದದ್ದು. ಕೂಡಿಯಾಟ್ಟಮ್ ಪ್ರಕಾರದ ದೊಡ್ಡ ಗುರುಗಳಾದ ಅಮ್ಮನ್ನೂರು ಮಾಧವ ಚಾಕ್ಯಾರ್ ಅವರಿಂದ ಈ ಅಭಿನಯವನ್ನು ಕಲಿತ ಉಷಾ ಅವರು ಈಗಾಗಲೇ ದೇಶವಿದೇಶಗಳಲ್ಲಿ ಪ್ರದರ್ಶನಗಳನ್ನು ನೀಡಿ ಪ್ರಸಿದ್ಧರಾಗಿದ್ದಾರೆ.

ಪ್ರಸ್ತುತ ಪ್ರದರ್ಶನ – 'ಕಂಸವಧೆ'ಯು ಪ್ರಸಿದ್ಧ ಕೃಷ್ಣಕಥಾನಕವನ್ನು ಆಧರಿಸಿದ್ದು; ಕೃಷ್ಣಕಥಾನಕದ ಲೀಲಾವಿನೋದಗಳನ್ನೊಳಗೊಂಡ ವಿವಿಧ ರಸಘಟ್ಟಗಳನ್ನು ತುಂಬ ಸಾವಧಾನವಾಗಿ ಮತ್ತು ನವರಸಗಳ ಸಮೇತ ನಿರೂಪಿಸುತ್ತ ಹೋಗುವಂಥದು. ಪ್ರದರ್ಶನದ ಅವಧಿ – ೭೫ ನಿಮಿಷಗಳು.

ಉಷಾ ನಾಂಗ್ಯಾರ್ ಅವರೊಂದಿಗಿರುವ ಕಲಾವಿದರು – ವಿ.ಕೆ.ಕೆ. ಹರಿಹರನ್ (ಮಿಳಾವು), ಕಲಾಮಂಡಲಮ್ ರವಿಕುಮಾರ್ (ಮಿಳಾವು), ಕಲಾಮಂಡಲಮ್ ಕೇಶವನ್ ಕುಟ್ಟಿ (ಎಡುಕ್ಕ), ಲಕ್ಷ್ಮೀಪ್ರಿಯ (ತಾಳಮ್).

**ಸಂಜೆ ೭ ಗಂಟೆಗೆ**

## ಅಕ್ಟೋಬರ್ ೧೩ ಬುಧವಾರ



ನೃತ್ಯ ಕಾರ್ಯಕ್ರಮ

# ನೃತರುತ್ಯ

### ಬೆಂಗಳೂರು – ತಂಡದ ಕಲಾವಿದರಿಂದ

ಸಂಸ್ಕೃತದ 'ನೃತ್ಯ' ಮತ್ತು 'ತರು' ಎಂಬ ಶಬ್ದಗಳನ್ನು ಕಸಿಮಾಡಿ, ನೃತರುತ್ಯ ಎಂಬ ಹೊಸ ಹೆಸರನ್ನು ಸೃಷ್ಟಿಸಿಕೊಂಡಿರುವ ಈ ತಂಡವು ನೃತ್ಯಮಾಧ್ಯಮದ ಪ್ರಯೋಗಶೀಲತೆಯಲ್ಲಿಯೂ ಕೂಡಾ ಸಾಂಪ್ರದಾಯಿಕ ಮತ್ತು ಆಧುನಿಕ ಕಲೆಗಳ ಸಂಶ್ಲೇಷಣೆಗೆ ಉದ್ಯುಕ್ತವಾಗಿದೆ. ಪಾರಂಪರಿಕ ನೃತ್ಯಗಳು, ಸಮರಕಲೆ ಮತ್ತು ಆಧುನಿಕ ನೃತ್ಯಮಾರ್ಗಗಳು – ಇವುಗಳ ಏಕೀಕೃತ ವ್ಯಾಕರಣದಲ್ಲಿ, ಆಧುನಿಕ ಜಗತ್ತಿನ ಅನುಭವಗಳಿಗೆ ಸಂವಾದಿಯಾದ ಮತ್ತು ಧ್ವನಿಪೂರ್ಣವಾದ ವಸ್ತುವಿಷಯಗಳನ್ನು ನೃತ್ಯದ ಆವರಣದೊಳಕ್ಕೆ ತಂದುಕೊಳ್ಳಬೇಕು ಎಂಬುದು ಈ ತಂಡದ ಎಲ್ಲ ಪ್ರಯೋಗಗಳ ಹಿಂದಿರುವ ಸ್ಥಾಯಿ ಆಶಯ. ಜತೆಗೆ, ಪ್ರತಿಯೊಂದು ನೃತ್ಯಪ್ರಯೋಗವೂ ಆಯಾ ಕಲಾವಿದರು ತಮ್ಮ ಸ್ವ-ವ್ಯಕ್ತಿತ್ವದೊಳಕ್ಕೆ ಪ್ರವೇಶಿಸುವ, ಮತ್ತು ಹುಡುಕಾಟಗಳನ್ನು ನಡೆಸುವ ಒಂದು 'ಯಾತ್ರೆ'ಯಂತಾಗಬೇಕು ಎಂಬ ಆಕಾಂಕ್ಷೆಯನ್ನು ಈ ಪ್ರಯೋಗಗಳು ತಮ್ಮ ಹಿನ್ನೆಲೆಯಲ್ಲಿಟ್ಟುಕೊಂಡಿವೆ.

ಪ್ರಸ್ತುತ ಕಾರ್ಯಕ್ರಮದಲ್ಲಿ, ಈ ತಂಡವು ಈಚೆಗೆ ಪ್ರಯೋಗಿಸಿದ 'ರಿಫ್ಲೆಕ್ಷನ್ಸ್' (ಪ್ರತಿಬಿಂಬಗಳು) ಎಂಬ ನೃತ್ಯಮಾಲಿಕೆಯಿಂದ ಆಯ್ದ ಕೆಲವು ನೃತ್ಯಭಾಗಗಳನ್ನು ಪ್ರಸ್ತುತಪಡಿಸಲಾಗುತ್ತದೆ. ಒಟ್ಟು ಅವಧಿ: ೬೦ ನಿಮಿಷ.

ತಂಡದಲ್ಲಿರುವ ಕಲಾವಿದರು ಮತ್ತು ತಂತ್ರಜ್ಞರು – ಮಯೂರಿ ಉಪಾಧ್ಯಾಯ, ಮಾಧುರಿ ಉಪಾಧ್ಯಾಯ, ಸತ್ಯನಾರಾಯಣ ಬಿ.ಜಿ., ಹರಿಣಿ ಬಿ.ಸಿ., ಗೀತಾ ಬಲ್ಲಾಳ್, ಉಮೇಶ ನಾಯ್ಡು, ಪ್ರಿಯಾ, ರೀಮಾ, ನಂದಕಿಶೋರ್, ಬಾಬು ಈಶ್ವರ ಪ್ರಸಾದ್ ಮತ್ತು ಚಂದ್ರಮೌಳಿ ಬಿ.ಸಿ.

**ಸಂಜೆ ೮.೩೦ ಗಂಟೆಗೆ**

## ಅಕ್ಟೋಬರ್ ೧೪ ಗುರುವಾರ

ಏಕವ್ಯಕ್ತಿ ರಂಗಪ್ರಯೋಗ

### ಕಬೀರ

ಶ್ರೀ ಶೇಖರ ಸೇನ್, ಮುಂಬಯಿ
ಅವರಿಂದ

ನಟ, ಗಾಯಕ ಮತ್ತು ಸಂಗೀತ ಸಂಯೋಜಕ ಶ್ರೀ ಶೇಖರ್ ಸೇನ್ ಅವರು ಸಂಗೀತಗಾರರ ಕುಟುಂಬದಲ್ಲಿ ಹುಟ್ಟಿದವರು. ಗ್ವಾಲಿಯರ್ ಘರಾಣಾದ ಶಾಸ್ತ್ರೀಯ ಗಾಯಕ ಡಾ. ಅರುಣ್ ಕುಮಾರ್ ಸೇನ್ ಮತ್ತು ಶ್ರೀಮತಿ ಅನಿತಾ ಸೇನ್ – ಇವರ ತಂದೆ-ತಾಯಿ ಮತ್ತು ಆರಂಭದ ಗುರುಗಳೂ ಕೂಡಾ. ಮುಂದೆ, ಶೇಖರ್ ಸೇನ್ ಶಾಸ್ತ್ರೀಯ ಸಂಗೀತದ ವಲಯವನ್ನು ಬಿಟ್ಟು ಭಕ್ತಿಕಾವ್ಯಗಳನ್ನು ಹಾಡುವ ವಿಶೇಷ ಒಲವು ಬೆಳೆಸಿಕೊಂಡರು; ಪರಿಣಾಮವಾಗಿಯೇ ಅವರು ಹಲವು ಭಕ್ತ-ಸಂತರನ್ನು ಕುರಿತ ಏಕವ್ಯಕ್ತಿ ಪ್ರಸ್ತುತಿಗಳನ್ನು ರೂಪಿಸಲು ತೊಡಗಿದರು. ಇವುಗಳಲ್ಲಿ ಬಹು ಪ್ರಸಿದ್ಧವಾದದ್ದು – ಪ್ರಸ್ತುತ ಪ್ರಯೋಗ, ‘ಕಬೀರ’.

ಸುಮಾರು ೨ ತಾಸಿನ ಅವಧಿಯ ಈ ‘ಕಬೀರ’ ಪ್ರಯೋಗದ ಕಥನವು ಭಾಷೆಯ ಎಲ್ಲೆಗಳನ್ನು ಮೀರಿ, ತುಂಬ ಸರಳವಾಗಿ ಸಂವಹಿತವಾಗುವಂಥದ್ದೂ ಮತ್ತು ಅಷ್ಟೇ ಆಕರ್ಷಕವೂ ಪರಿಣಾಮಕಾರಿಯೂ ಆಗಿದೆ. ಕಬೀರನ ಜೀವನದ ನಿರ್ದಿಷ್ಟ ಘಟನೆಗಳನ್ನು ಅವನದೇ ಸುಮಾರು ೪೫ ಹಾಡುಗಳೊಂದಿಗೆ ಹೆಣೆದು ಕಟ್ಟುವ ಈ ಪ್ರಯೋಗವು ಇವತ್ತಿನ ಭಾರತದ ಸಂದರ್ಭದಲ್ಲಿ ಕಬೀರ ಚಿಂತನೆಯ ಉಪಯುಕ್ತತೆಯನ್ನು ಕುರಿತು ರಂಗಚಿಂತನೆಯೊಂದನ್ನು ನಡೆಸುತ್ತದೆ.

ಶೇಖರ್ ಸೇನ್ ಅವರ ಪ್ರಸ್ತುತ ಪ್ರಯೋಗವು ಇದುವರೆಗೆ ನೂರಾರು ಪ್ರದರ್ಶನಗಳನ್ನು ಕಂಡಿದೆ ಮತ್ತು ದೇಶವಿದೇಶಗಳನ್ನು ಸಂಚರಿಸಿದೆ.

**ಸಂಜೆ ೭ ಗಂಟೆಗೆ**

## ಅಕ್ಟೋಬರ್ ೧೫ ಶುಕ್ರವಾರ

ಕೂಚಿಪುಡಿ ನೃತ್ಯ ಕಾರ್ಯಕ್ರಮ

### ಭಾಮಾಕಲಾಪ - ಉಷಾಪರಿಣಯ

ಶ್ರೀ ವೇದಾಂತಮ್ ಸತ್ಯನಾರಾಯಣಶರ್ಮ
ಆಂಧ್ರಪ್ರದೇಶ – ತಂಡದ ಕಲಾವಿದರಿಂದ

ಆಂಧ್ರಪ್ರದೇಶದ ಸಾಂಪ್ರದಾಯಿಕ ರಂಗಕಲೆಯಾದ ಕೂಚಿಪುಡಿಯನ್ನು ತಮ್ಮ ಜೀವಮಾನದಾದ್ಯಂತ ಕಲಿತು-ಕಲಿಸಿ, ಆ ಮೂಲಕ ಈ ಪ್ರಕಾರವನ್ನು ದೇಶದ ಉದ್ದಗಲಕ್ಕೆ ಪ್ರಖ್ಯಾತಗೊಳಿಸಿದ ಮುಖ್ಯವ್ಯಕ್ತಿಗಳಲ್ಲೊಬ್ಬರು – ವೇದಾಂತಮ್ ಸತ್ಯನಾರಾಯಣ ಶರ್ಮ. ಅವರ ಪ್ರಸಿದ್ಧ ಶಾಲೆಯಾದ ಸಿದ್ಧೇಂದ್ರ ಕಲಾಕ್ಷೇತ್ರವು ಈಗಾಗಲೇ ಹಲವು ಕಲಾವಿದರನ್ನು ಸೃಷ್ಟಿಸಿದೆ; ದೇಶವಿದೇಶಗಳಲ್ಲಿ ಪ್ರಯೋಗಗಳನ್ನು ಕೊಟ್ಟಿದೆ. ಆ ಶಾಲೆಯ ಸುಮಾರು ೧೫ ಜನ ನುರಿತ ಕಲಾವಿದರ ತಂಡವು ನಡೆಸುವ ಪ್ರಯೋಗ ಇದು.

ಈ ತಂಡದ ವಿಶೇಷವೆಂದರೆ, ಇವರು ಕೂಚಿಪುಡಿ ಪ್ರಕಾರವನ್ನು ಇನ್ನೂ ಅದರ ‘ಸಾಂಪ್ರದಾಯಿಕ’ ರೂಪದಲ್ಲೇ ಉಳಿಸಿಟ್ಟುಕೊಂಡಿದ್ದಾರೆ; ಸ್ತ್ರೀಪಾತ್ರಗಳನ್ನು ಗಂಡಸರೇ ಮಾಡುವುದು ಮೊದಲಾದ ಹಲವು ಹಳೆಗಾಲದ ಪದ್ಧತಿಗಳು ಈ ತಂಡದಲ್ಲಿ ಇನ್ನೂ ಹಾಗೇ ಉಳಿದುಕೊಂಡಿವೆ.

ಪ್ರಸ್ತುತ ಕಾರ್ಯಕ್ರಮದಲ್ಲಿ, ಸಾಂಪ್ರದಾಯಿಕ ಕೂಚಿಪುಡಿ ಪ್ರಕಾರದಲ್ಲಿ ತುಂಬ ಪ್ರಸಿದ್ಧವಾದ ಎರಡು ಕಥಾಭಾಗಗಳನ್ನು ಅಭಿನಯಿಸಲಾಗುತ್ತದೆ. ಮೊದಲನೆಯದು, ಕೃಷ್ಣ-ಸತ್ಯಭಾಮೆಯರ ನಡುವೆ, ಯಾರು ಹೆಚ್ಚು ಸುಂದರರೆಂದು ನಡೆದ ಪೌರಾಣಿಕ ವಾಗ್ವಾದವನ್ನು ಕೇಂದ್ರವಾಗಿಟ್ಟುಕೊಂಡ ಕಥನ; ಎರಡನೆಯದು, ಬಾಣಾಸುರನ ಮಗಳು ಉಷೆಯು ಅನಿರುದ್ಧನನ್ನು ಪ್ರೀತಿಸಿ, ತಂದೆಯ ವಿರೋಧದ ಬಳಿಕವೂ ಅಂತಿಮವಾಗಿ ಅವನನ್ನು ವರಿಸುವ ಕಥೆಯನ್ನುಳ್ಳದ್ದು. ಒಟ್ಟು ಪ್ರದರ್ಶನದ ಅವಧಿ: ಎರಡು ಗಂಟೆ.

**ಸಂಜೆ ೭ ಗಂಟೆಗೆ**

ಅಕ್ಟೋಬರ್ ೧೬ ಶನಿವಾರ

ಸಂಗೀತ ಕಾರ್ಯಕ್ರಮ

## ರವಿಕಿರಣ

ಅವರಿಂದ ಹಿಂದುಸ್ತಾನಿ ಗಾಯನ

ಸಮೀಪದ ದಕ್ಷಿಣ ಕನ್ನಡ ಜಿಲ್ಲೆಯವರಾದ ಶ್ರೀ ರವಿಕಿರಣ ಅವರು ತಮ್ಮ ಹನ್ನೊಂದನೆಯ ವಯಸ್ಸಿನಿಂದಲೇ ಸಂಗೀತದ ಬಗ್ಗೆ ವಿಶೇಷ ಒಲವನ್ನು ಬೆಳೆಸಿಕೊಂಡವರು. ಮೊದಲಿಗೆ, ಚಿಕ್ಕಪ್ಪ ಶ್ರೀ ಗುರುರಾಜ ಮಾರ್ಪಳ್ಳಿ ಅವರ ಬಳಿ ಸಂಗೀತಾಭ್ಯಾಸವನ್ನು ಆರಂಭ ಮಾಡಿದ ಇವರು, ಆಮೇಲೆ ಗ್ವಾಲಿಯರ್ ಮತ್ತು ಆಗ್ರಾ ಘರಾಣಾಗಳ ಪ್ರಸಿದ್ಧ ಗಾಯಕರಾದ ಕರ್ನಾಟಕ ಕಲಾಶ್ರೀ ಪಂಡಿತ ಜಿ. ಮಾಧವ ಭಟ್ ಅವರಲ್ಲಿ ಹಲವು ವರ್ಷ ತರಬೇತಿಯನ್ನು ಪಡೆದಿದ್ದಾರೆ. ಪ್ರಸ್ತುತ ಮಣಿಪಾಲದಲ್ಲಿ ನೆಲೆಸಿ ಇಂಜನಿಯರಿಂಗ್ ಅಧ್ಯಾಪನದ ವೃತ್ತಿಯಲ್ಲಿ ತೊಡಗಿರುವ ರವಿಕಿರಣ ಅವರು ಪ್ರಮುಖ ಯುವ ಸಂಗೀತಗಾರನಾಗಿ ಬೆಳೆಯುತ್ತಿರುವವರು.

ಗ್ವಾಲಿಯರ್ ಮತ್ತು ಆಗ್ರಾ ಘರಾಣಾಗಳ ಶೈಲಿಯನ್ನು ಸಮೀಕರಿಸಿದ ಸಂಗೀತ ಮಾದರಿಯೊಂದನ್ನು ಆವಿಷ್ಕರಿಸುತ್ತಿರುವ ಶ್ರೀ ರವಿಕಿರಣ ತಮ್ಮ ವಿಶಿಷ್ಟ ಗಾಯನದ ಛಾಪಿನಿಂದ ಕಲಾಸಕ್ತರು ಮತ್ತು ವಿಮರ್ಶಕರ ಗಮನ ಸೆಳೆದಿದ್ದಾರೆ. ಮುಂಬಯಿ, ಕಲ್ಲಿಕೋಟೆ, ಧಾರವಾಡ, ಬೆಳಗಾವಿ, ಬೆಂಗಳೂರು ಮೊದಲಾದ ಹಲವು ಊರುಗಳಲ್ಲಿ ಪ್ರಖ್ಯಾತ ಸಂಗೀತ ಸಂಸ್ಥೆಗಳ ಆಶ್ರಯದಲ್ಲಿ ಇವರ ಕಛೇರಿಗಳು ನಡೆದಿವೆ. ಯುವ ಸಂಗೀತಗಾರರಿಗಾಗಿ ನಡೆದ ಹಲವಾರು ಸ್ಪರ್ಧೆಗಳಲ್ಲಿ ಇವರಿಗೆ ಬಹುಮಾನಗಳು ಬಂದಿವೆ.

ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಸಹಕಲಾವಿದರು – ಶಶಿಕಿರಣ (ಹಾರ್ಮೊನಿಯಂ), ರಂಗ ಪೈ (ತಬಲಾ), ರವಿ ಕಟ್ಟಿ (ಸಹಗಾಯನ).

ಸಂಜೆ ೭ ಗಂಟೆಗೆ

ಅಕ್ಟೋಬರ್ ೧೬ ಶನಿವಾರ

ನಾಟಕ

## ಮಲ್ಲಿನಾಥನ ಧ್ಯಾನ

ಧ್ಯಾನ ರೆಪರ್ಟರಿ, ಬೆಂಗಳೂರು

ನಿರ್ದೇಶನ: ನಟರಾಜ ಹೊನ್ನವಳ್ಳಿ

ನೀನಾಸಮ್ ರಂಗಶಿಕ್ಷಣ ಕೇಂದ್ರದಲ್ಲಿ ಅಭ್ಯಾಸ ಮಾಡಿ, ಆಮೇಲೆ ರಂಗಭೂಮಿ ಮತ್ತು ಇತರ ಮಾಧ್ಯಮಗಳಲ್ಲಿ ಹಲವು ವರ್ಷ ಕೆಲಸ ಮಾಡಿ ಅನುಭವ ಪಡೆದ ಕೆಲವು ಯುವ ಕಲಾವಿದರು ಕೂಡಿ ರೂಪಿಸಿಕೊಂಡ ಸಂಘಟನೆ – ಧ್ಯಾನ ರೆಪರ್ಟರಿ. ಈ ತಂಡವು ನಿರ್ಮಿಸಿಕೊಂಡ ಮೊತ್ತಮೊದಲನೆಯ ಪ್ರಯೋಗ ಇದು.

ಪ್ರಸ್ತುತ ರಂಗಕೃತಿ 'ಮಲ್ಲಿನಾಥನ ಧ್ಯಾನ'ವು ಪ್ರಸಿದ್ಧ ಕನ್ನಡ ಲೇಖಕಿ ವೈದೇಹಿ ಅವರ ಮೂರು ಕಥೆಗಳನ್ನು ಆಧರಿಸಿ ನಿರ್ಮಿತವಾಗಿದೆ. ಕಥೆಗಳನ್ನು ನಾಟಕವಾಗಿ ರೂಪಾಂತರಗೊಳಿಸದೆ, ಅದರ ಕಥನರೂಪದಲ್ಲಿಯೇ ಅವನ್ನು ಪ್ರಸ್ತುತಪಡಿಸುವ ಪ್ರಯೋಗವನ್ನು ಈ ರಂಗಕೃತಿ ಮಾಡುತ್ತದೆ. ಅತ್ತ ವಾಗ್ವಿಲಾಸದ ಕಡೆಗೂ ಇತ್ತ ದೃಶ್ಯವೈಭವದ ಕಡೆಗೂ ವಾಲದೆ, ನಡುವಿನ ಹದದಲ್ಲಿ ರಂಗಾನುಭವವೊಂದನ್ನು ಕಟ್ಟುವ ಕ್ರಮವೊಂದನ್ನು ಆವಿಷ್ಕರಿಸುವ ಮಹತ್ವಾಕಾಂಕ್ಷೆ ಈ ಪ್ರಯೋಗದ ಹಿಂದಿದೆ.

ಶ್ರೀಮತಿ ಭವಾನಿ, ಶ್ರೀಮತಿ ಲಕ್ಷ್ಮೀ ಕಬ್ಬೇರಳ್ಳಿ ಮತ್ತು ಶ್ರೀಮತಿ ಶೈಲಶ್ರೀ ಅವರು ಈ ಪ್ರಯೋಗದಲ್ಲಿ ನಟಿಯರಾಗಿ ಕಾಣಿಸಿಕೊಳ್ಳುತ್ತಾರೆ. ಇವರಲ್ಲದೆ ತಾಂತ್ರಿಕ ವರ್ಗದಲ್ಲಿ ಪಾಲ್ಗೊಂಡ ಕಲಾವಿದರು – ಶ್ರೀ ಪ್ರದೀಪ್ ಮತ್ತು ಶ್ರೀ ಧರ್ಮೇಂದ್ರ ಅರಸ್ (ಬೆಳಕು), ಶ್ರೀ ಪಾಣಿನಿ (ಸಂಗೀತ ನಿರ್ವಹಣೆ), ಶ್ರೀ ಪ್ರಕಾಶ್ ಬಾಬು (ವಿನ್ಯಾಸ), ಶ್ರೀಮತಿ ಅರುಂಧತಿ ನಾಗ್ (ವಸ್ತ್ರ ವಿನ್ಯಾಸ), ಶ್ರೀ ಎಸ್.ಆರ್. ರಾಮಕೃಷ್ಣ (ಸಂಗೀತ ವಿನ್ಯಾಸ).

ಸಂಜೆ ೮.೩೦ ಗಂಟೆಗೆ

## NINASAM
## CULTURE COURSE 2004
## The Evening Festival

**10th October, Sunday**
Tirugata Performance - ***Dyavanooru***
Directed by C. Basavalingiah

**11th October, Monday**
Tirugata Performance - ***Raaja Mattu Raani***
Directed by B.R. Venkataramana Aithal

**12th October, Tuesday**
Saxophone Recital by
**Padmasri Kadri Gopalanath**

**13th October, Wednesday**
Nangyar Koothu Performance by
**Usha Nangyar & group**
Dance performance by
**Nritarutya, Bangalore**

**14th October, Thursday**
One-man Performance
***Kabeer***
by Shekhar Sen, Mumbai

**15th October, Friday**
Kuchipudi Dance Performance
***Bhamakalapam, Ushaparinayam****
by Vedantam Styanarayana Sharma
and group, Andhra Pradesh

**16th October, Saturday**
Hindustani Music Recital by
**Ravikiran**
Performance by Dhyana Repertory
***Mallinathana Dhyana***

* This programme is sponsored by
**The Sangit Natak Akademi, New Delhi.**

## NINASAM
## CULTURE COURSE

The Culture Course has been one of Ninasam's major annual events for the last two decades. Held over 7 days every October, The Course is designed around a specific theme every year, and organised as a combination of special lectures on the theme, lecture-demonstration-discussions on fundamentals of appreciation of art forms like literature, theatre, film, music, dance, and so on -all this during the day-sessions, and a series of cultural programmes in the evenings, like classical dance/music recitals, theatre and folk art performances, poetry readings, and film screenings.

Some of the themes over these years have been- Village India, Gods and Goddesses, The 20th Century-a Review, Tradition/s, Religion, Cultural Alternatives. The theme for this year's course is 'Activism'.

The Culture Course has a two fold objective: 1. To create an annual forum in Karnataka, where intellectuals from within Karnataka and outside meet and discuss important issues related to contemporary culture and society, and 2. To share these discussions with cultural activists, involved in various socio-political and cultural activities in the non urban parts of Karnataka.

Thus, the major attempt of the Course is to bridge a gap between the 'intellectuals' mostly concentrated in the academic institutes and the 'activists' scattered in small non urban organisations across Karnataka.

**NINASAM**
Heggodu, Sagara Tq.,Shimoga Dist.,
Karnataka 577 417
Ph: 08183-265646 Fax: 08183-265673